O.S. 128/2014

P.W.1

**<u>ಸಾಕ್ಷಿಯನ್ನು ದಿನಾಂಕಃ 23-02-2023 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಮುಂದುವರೆದ ಪಾಟೀಸವಾಲುಃ ಶ್ರೀ.ಪಿ.ಜೆ.ಜೆ.ವಕೀಲರವರಿಂದಃ</u>**

ದಾವಾ ಆಸ್ತಿಯು ಮೊದಲಿನಿಂದಲೂ ಸಿದ್ದಲಿಂಗಪ್ಪನ ಸ್ವಾಧಿನದಲ್ಲಿ ಇತ್ತು ಎಂದರೆ ಸರಿಯಲ್ಲ. ನಾನು ಪ್ರತಿವಾದಿಯಿಂದ ಯಾವ ತಾರೀಕು, ತಿಂಗಳು, ವರ್ಷದಂದು ಸಾಲ ತೆಗೆದುಕೊಂಡಿರುತ್ತೇನೆ ಅಂತ ನನಗೆ ನೆನಪಿರುವುದಿಲ್ಲ. ಸಾಲಪಡೆದ ದಿನ ನಾವು ಯಾವುದೇ ದಾಖಲೆಗಳನ್ನು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾವು ಅಣ್ಣತಮ್ಮಂದಿರಾಗಿರುವುದರಿಂದ ಯಾವುದೇ ದಾಖಲೆಗಳನ್ನು ಮಾಡಿಕೊಂಡಿರುವುದಿಲ್ಲ. ನಾನು ಸದರಿ ಹಣವನ್ನು ಪ್ರತಿವಾದಿಯಿಂದ ಪಡೆದ ದಿನಾಂಕ, ತಿಂಗಳು ಮತ್ತು ವರ್ಷವನ್ನು ನನ್ನ ವಾದಪತ್ರದಲ್ಲಿ ಬರೆದಿರುವುದಿಲ್ಲ. ಸನ್ 1989 ರಲ್ಲಿ ನಾವು ಮತ್ತು ನನ್ನ ಸಹೋದರರು ಎಲ್ಲಾರೂ ಪಾಲುವಿಭಾಗ ಮಾಡಿಕೊಂಡ ನಂತರ ನಾನು ಮತ್ತು ಪ್ರತಿವಾದಿ ಸೇರಿ ದಾವಾ ಸರ್ವೆ ನಂ.211 ಎ ಮತ್ತು ಎರಡು ಹಂಚಿನ ಮನೆಗಳನ್ನು ಜಂಟಿಯಾಗಿ ಪಾಲುವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಕೆರೆಗುಡಿ ಗ್ರಾಮದಲ್ಲಿ ಎರಡು ಹಂಚಿನ ಮನೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯಿಂದ ಸಾಲ ಪಡೆದು ಜಮೀನನ್ನು ಬೆಳೆದುಕೊಳ್ಳಲು ಕೊಟ್ಟಿದ್ದೆನು ಅಂತ ಸುಳ್ಳುಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.211 ಎ ದಲ್ಲಿ ಎಟ್ಟು ಕ್ಷೇತ್ರ 1 ಎಕರೆ 96 ಸೆಂಟ್ಸ್ ಜಮೀನಿನಲ್ಲಿ ಪ್ರತಿವಾದಿಯು ಸ್ವಾದೀನದಲ್ಲಿ ಇರುತ್ತಾನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಪ್ರತಿವಾದಿಯ ಹೆಸರಿನಲ್ಲಿ ಇರುವುದರಿಂದ ದಿಃ 12-02-2001 ರಂದು ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸಂಗತಿ ನನಗೆ ಗೋತ್ತಿರುತ್ತದೆ ಎಂದರೆ ಸರಿಯಲ್ಲ. ಸದರಿ ಖಾತೆ ಬದಲಾವಣೆಯಾದ ವಿಷಯ ನನಗೆ 2001 ರಲ್ಲಿ ಗೋತ್ತಾಗಿರುತ್ತದೆ. 2001 ರಿಂದ ನಾನು ಸದರಿ ಬದಲಾವಣೆಯನ್ನು ರದ್ದು ಪಡಿಸಲು ಪ್ರಯತ್ನಿಸಿರುತ್ತೇನೆ. ಸಾಕ್ಷಿಯು ಮುಂದುವರೆದು ನನ್ನ ಅಣ್ಣ ಅಜ್ಜಪ್ಪನು ಖಾತೆಯನ್ನು ರದ್ದು ಪಡಿಸುತ್ತೇನೆ ಎಂದು ಹೇಳಿರುತ್ತಾರೆ. ಅಜ್ಜಪ್ಪನು ಈಗ ಪೋತಿಯಾಗಿರುತ್ತಾನೆ. ನಾನು ಪ್ರತಿವಾದಿಯಿಂದ ಯಾವುದೇ ಹಣವನ್ನು ಸಾಲವಾಗಿ ಪಡೆದಿರುವುದಿಲ್ಲ, ಆತನ ಆಸ್ತಿಯನ್ನು ಕಬಳಿಸಬೇಕೆನ್ನುವ ಉದ್ದೇಶದಿಂದ ಒಪ್ಪಿಗೆ ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಒಪ್ಪಿಗೆ ಪತ್ರದಲ್ಲಿ ನಾನು ಸದರಿ ಪತ್ರವನ್ನು ನೊಂದಾಯಿಸಿಕೊಳ್ಳಬೇಕೆಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ನನ್ನ ತಮ್ಮ ಹಾಗೇ ಹೇಳಿರುತ್ತಾನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ನನಗೆ ಯಾವುದೇ ರೀತಿಯಂದ ಸಂಬಂದವಿಲ್ಲದಿದದರೂ ಅದನ್ನು ಕಬಳಿಸಬೇಕೆಂದು ಸುಳ್ಳು ಸಾಕ್ಷಿಯನ್ನು ಹೇಳುತ್ತಿದೇನೆ ಎಂದರೆ ಸರಿಯಲ್ಲ.

O.S. 128/2014

P.W.1

ನಾನು ನ್ಯಾಯಾಲಯದಲ್ಲಿ ಬೇರೆ-ಬೇರೆ ಎರಡು ಪ್ರಕರಣಗಳನ್ನು ದಾಖಲಿಸಿದ್ದೇನೆ ಎಂದರೆ ಸರಿ. ನನ್ನ ಹೆಂಡತಿಯಿಂದ ಒಂದು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ನಾನು ಉದ್ದೇಶಪೂರ್ವಕವಾಗಿ ದಾವಾ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ದಾಖಲೆಗಳನ್ನು ಸಲ್ಲಿಸಿ, ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**